# ನಾಣ್ಯ... ಈಗ ಫ್ಯಾಷನ್ ಟ್ರೆಂಡ್!




ನಾಣ್ಯಗಳಿಂದ ತಯಾರಿಸಿದ ಸರ, ಪೆಂಡೆಂಟ್, ಉಂಗುರಗಳು ಫ್ಯಾಷನ್ ಲೋಕದಲ್ಲಿ ಎವರ್‌ಗ್ರೀನ್ ಟ್ರೆಂಡಿಯಾಗಿವೆ. ಸಾಂಪ್ರದಾಯಿಕ, ಆಧುನಿಕ ಎರಡೂ ಮನೋಭಾವದ ಮಹಿಳೆಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ.

**■ ಆಶಾ ಎಸ್.ಕುಲಕರ್ಣಿ**

ಫಳಫಳನೇ ಹೊಳೆಯುವ ಚಿನ್ನ, ಬೆಳ್ಳಿ, ತಾಮ್ರ, ಕಂಚಿನ ನಾಣ್ಯಗಳು ಇದೀಗ ಮಹಿಳೆಯರ ಕತ್ತನ್ನು ಅಲಂಕರಿಸುತ್ತಿವೆ. ಫ್ಯಾಷನ್ ಲೋಕವೇ ಹಾಗೆ. ಇಂದಿನ ಫ್ಯಾಷನ್ ನಾಳೆ ಔಟ್ ಆಫ್ ಫ್ಯಾಷನ್ ಆಗುವ ಸಾಧ್ಯತೆಗಳೇ ಹೆಚ್ಚು. ಹೀಗಿರುವಾಗ ದಿನಕ್ಕೊಂದು ಫ್ಯಾಷನ್ ಅಪ್‌ಡೇಟ್ ಆಗುತ್ತಲೇ ಇದೆ. ಇದೀಗ ನಾಣ್ಯಗಳ ಸರದಿ. ನಾಣ್ಯಗಳನ್ನು ಮಾಲೆಗಳಂತೆ ಪೋಣಿಸಿ ಸರ ಮಾಡಿ ಕತ್ತಿಗೆ ಹಾಕಿಕೊಳ್ಳುವ ಶೈಲಿ ಇಂದು ನಿನ್ನೆ ಶುರುವಾಗಿದ್ದಲ್ಲ.

ಹಿಂದಿನ ಕಾಲದಲ್ಲಿ ಕಾಸಿನ ಸರ ತೊಡುವವರು ಎಂದರೆ ಅತೀ ಶ್ರೀಮಂತರು ಎಂಬ ಭಾವನೆ ಇತ್ತು. ಅದೇ ರೀತಿ ಪುರಾತನ ಯುಗದಲ್ಲಿಯೂ ಕೂಡ ಚಿನ್ನ, ಬೆಳ್ಳಿ, ತಾಮ್ರ, ಕಂಚು ಹೀಗೆ ಬಗೆಬಗೆಯ ನಾಣ್ಯಗಳ ಸರವನ್ನು ಪುರುಷರು, ಮಹಿಳೆಯರು, ಮಕ್ಕಳು ತೊಡುತ್ತಾ ಬಂದಿದ್ದಾರೆ. ಕೇವಲ ಭಾರತದಲ್ಲಷ್ಟೇ ಅಲ್ಲ, ವಿದೇಶದಲ್ಲಿಯೂ ಮಹಿಳೆಯರು ಡಾಲರ್ ಚೈನ್ ಧರಿಸಿರುವುದನ್ನು ನೀವು ನೋಡಿರಬಹುದು. ಇದೇ ಕಾರಣಕ್ಕೆ ಲಕ್ಷ್ಮಿ ಪೆಂಡೆಂಟ್ ಅನ್ನೂ ಡಾಲರ್ ಎಂದು ಕರೆಯಲಾಗುತ್ತಿತ್ತು. ಈ ಶೈಲಿ ಈಗ ಮತ್ತೆ ಫ್ಯಾಷನ್ ಲೋಕವನ್ನು ಪ್ರವೇಶಿಸಿದೆ.

ಇದೀಗ ಕಾಸಿನ ಸರ ಮತ್ತೆ ಟ್ರೆಂಡಿಯಾಗಿದ್ದು, ಈಗ ಬರೀ ಚಿನ್ನ, ಬೆಳ್ಳಿಯ ಡಾಲರ್‌ಗಳ ಬದಲಿಗೆ ಹಿಂದೆ ಬಳಕೆಯಲ್ಲಿದ್ದ ನಾಣ್ಯಗಳಾದ 5 ಪೈಸೆ, 10 ಪೈಸೆ, 25 ಪೈಸೆ, 50 ಪೈಸೆ ಪೈಸೆಯ ವಿಭಿನ್ನ ಆಕಾರಗಳ ನಾಣ್ಯಗಳು ಹಾಗೂ ಹಳೆಯ ಕಾಲದ ನಾಣ್ಯಗಳ ಜೊತೆಗೆ ವಿದೇಶದಲ್ಲಿ ಬಳಕೆಯಲ್ಲಿದ್ದ ಹಳೆಯ ಡಾಲರ್‌ಗಳನ್ನು ಬಳಸಿಕೊಂಡು ಮಾಲೆ ತಯಾರಿಸಿ

